ಅ) 1) ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ಹುದ್ದೆಗಳನ್ನು ಜಿಲ್ಲಾಮಟ್ಟದಲ್ಲಿ ಜೇಷ್ಠತಾನುಸಾರ ಹುದ್ದೆಗಳು ಖಾಲಿಯಾದಂತೆ ಆಯಾ ವರ್ಷದಲ್ಲಿ ಭರ್ತಿ ಮಾಡಲಾಗುತ್ತಿದೆ.

2) ಇತ್ತೀಚಿಗೆ ಸ್ಥಾನಪನ್ನ ಬಡ್ತಿ ನೀಡಲು ಒದಗಿರುವ 210 ಹುದ್ದೆಗಳಿಗೆ ಪದೋನ್ನತಿ ನೀಡುವ ವಿಷಯ ಪರಿಶೀಲನೆಯಲ್ಲಿದೆ.

ಆ) 1) ಶೇ.100 ರಷ್ಟು ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರ ಹುದ್ದೆಗಳನ್ನು ಬಡ್ತಿ ಮೂಲಕ ತುಂಬಲಾಗುತ್ತದೆ.

2) ಶೇ.50 ನೇರನೇಮಕಾತಿ ಮತ್ತು ಶೇ.50 ಬಡ್ತಿ ಮುಖಾಂತರ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಹುದ್ದೆಗಳನ್ನು ತುಂಬಲು ಅವಕಾಶವಿದೆ. ಈಗಲೂ ಇದೇ ನೀತಿಯನ್ನು ಅಳವಡಿಸಲಾಗುತ್ತಿದೆ.

ಈ) ಮೇಲೆ 'ಆ' ಗೆ ನೀಡಿರುವ ಉತ್ತರ ಇದಕ್ಕೂ ಅನ್ವಯಿಸುತ್ತದೆ.

**ಗಣಕ ಪರಿಷತ್ತಿನ ಕನ್ನಡ ನುಡಿಗೆ ಸಾಫ್ಟ್‌ವೇರ್ ಕಂಪನಿಗಳ ಅಡ್ಡಗಾಲು**

1230 (1612) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಣಕ ಪರಿಷತ್ತಿಗೆ ಸರ್ಕಾರ ನೀಡಿರುವ ಅನುದಾನ ಮೊತ್ತವೆಷ್ಟು;

ಆ) ಕನ್ನಡ ನುಡಿ ಸಾಫ್ಟ್‌ವೇರ್‌ಗಳನ್ನು ಸರ್ಕಾರ ಉಚಿತವಾಗಿ ಸರಬರಾಜು ಮಾಡಲಿದೆಯೇ;

ಇ) ಯಾವ ಮಾನದಂಡದ ಆಧಾರದ ಮೇಲೆ ಉಚಿತವಾಗಿ ನೀಡುತ್ತದೆ; ಈ ಯೋಜನೆಯ ಒಟ್ಟು ಹಣವೆಷ್ಟು;

ಈ) ಈ ಕ್ರಮದಿಂದಾಗಿ ಖಾಸಗಿ ಸಾಫ್ಟ್‌ವೇರ್ ಕಂಪನಿಗಳಿಗೆ ನಷ್ಟವುಂಟಾಗುತ್ತಿದೆಯೇ; ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು;

ಶ್ರೀಮತಿ ರಾಣಿಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಗಣಕ ಪರಿಷತ್ತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಯಾವುದೇ ಅನುದಾನವನ್ನು ನೀಡಿರುವುದಿಲ್ಲ. ಆದರೆ ಇಲಾಖೆಯ ವೆಬ್‌ಸೈಟ್ ಸಿದ್ಧಪಡಿಸಲು ರೂ. 3.00ಲಕ್ಷ ಹಾಗೂ ಇಲಾಖೆಗೆ ಅಗತ್ಯವಿರುವ ತಂತ್ರಾಂಶ ಅಭಿವೃದ್ಧಿಗೆ ರೂ. 1.00 ಲಕ್ಷಗಳನ್ನು ಪಾವತಿಸಲಾಗಿದೆ.

ಆ) "ನುಡಿ" ಕನ್ನಡ ಸಾಫ್ಟ್‌ವೇರನ್ನು ಎಲ್ಲರಿಗೂ ಉಚಿತವಾಗಿ ದೊರಕುವಂತ ಮಾಹಿತಿ ತಂತ್ರಜ್ಞಾನ ಇಲಾಖೆ ವ್ಯವಸ್ಥೆ ಮಾಡಿದೆ. ಈ ಸಾಫ್ಟ್‌ವೇರ್‌ನ್ನು ಆ ಇಲಾಖೆಯ ವೆಬ್‌ಸೈಟ್ ಆದ WWW.Bangaloreit.Com ನಲ್ಲಿ ಹಾಕಲಾಗಿದ್ದು, ಅಲ್ಲಿಂದ ಪ್ರಪಂಚದ ಯಾವುದೇ ಭಾಗದಲ್ಲಿರುವವರು ಅವಶ್ಯಕವಾದಾಗ ಸಾಫ್ಟ್‌ವೇರ್ ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಇ) ಕಂಪ್ಯೂಟರ್‌ಗಳಲ್ಲಿ ಕನ್ನಡ ಬಳಕೆಯನ್ನು ಜನ ಪ್ರಿಯಗೊಳಿಸುವ ಸದುದ್ದೇಶದಿಂದ ಸರ್ಕಾರವು ನಿಗದಿಪಡಿಸಿರುವ ಶಿಷ್ಟತೆಗಳನುಸಾರ ಅಭಿವೃದ್ಧಿಪಡಿಸಲಾಗಿರುವ ಈ ಸಾಫ್ಟ್‌ವೇರನ್ನು ಉಚಿತವಾಗಿ ನೀಡಲಾಗುತ್ತಿದೆ. ಕಂಪ್ಯೂಟರ್‌ಗಳಲ್ಲಿ ಕನ್ನಡದ ಬಳಕೆಯನ್ನು ಅದರಲ್ಲೂ ಮುಖ್ಯವಾಗಿ ಸರ್ಕಾರ ಇಲಾಖೆಗಳ ವಿದ್ಯುನ್ಮಾನ ಆಡಳಿತದಲ್ಲಿ ಕನ್ನಡದ ವ್ಯಾಪಿಕ ಬಳಕೆಗೆ ಅನುಕೂಲವಾಗುವಂತೆ ಅಗತ್ಯವಾದ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಲು ಹಾಗೂ ನುಡಿ ತಂತ್ರಾಂಶಗಳನ್ನು ಇನ್ನಷ್ಟು

ಉತ್ತಮಪಡಿಸಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ 20.00ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಯೋಜನೆಯನ್ನು ಮಾಹಿತಿ ತಂತ್ರಜ್ಞಾನ ಇಲಾಖೆಯಿಂದ ಸಿದ್ದಪಡಿಸಲಾಗಿದೆ.

ಈ) ಇಲ್ಲ

ಉದ್ಭವಿಸುವುದಿಲ್ಲ.

## ಮೈಸೂರು ವಿ.ವಿ.ಯಲ್ಲಿ ಹಣ ದುರ್ಬಳಕೆ

1231 (1613) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೆಲವು ಹಗರಣಗಳು ನಡೆದಿರುವುದು ನಿಜವೇ;

ಆ) ಸಾರ್ವಜನಿಕರ ಅಭಿಪ್ರಾಯಕ್ಕೆ ವಿರೋಧವಾಗಿ ನಡೆದಿರುವಂತಹ ಹಗರಣಗಳಾವುವು;

ಇ) ಈ ಕೆಲವು ಹಗರಣಗಳ ಜೊತೆಯಲ್ಲಿ ವಿಶ್ವವಿದ್ಯಾಲಯ ಒಳಗೆ ಕುಲಸಚಿವರಾಗಿದ್ದವರು ಹಣ ದುರುಪಯೋಗ ಮಾಡಿಕೊಂಡಿರುವ ಪ್ರಕರಣ ನಡೆದಿದೆಯೇ;

ಈ) ವಿಶ್ವವಿದ್ಯಾಲಯ ನೀತಿ-ನಿಯಮಗಳನ್ನು ಗಾಳಿಗೆ ತೂರಿ ದುರುಪಯೋಗಪಡಿಸಿಕೊಂಡ ಹಣ ಎಷ್ಟು;

ಉ) ಹಣ ದುರ್ಬಳಕೆಯ ಸ್ವರೂಪಗಳೇನು ಮತ್ತು ಈ ಹಗರಣಕ್ಕೆ ಕಾರಣರಾರು; ಇವರನ್ನು ಸೇವೆಯಿಂದ ಹಿಂದಕ್ಕೆ ಪಡೆಯಲು ವಿಶ್ವವಿದ್ಯಾನಿಲಯ ನಿರ್ಣಯವನ್ನು ಕೈಗೊಂಡಿದೆಯೇ;

ಊ) ಈ ವಿಶ್ವವಿದ್ಯಾನಿಲಯದ ಶಿಫಾರಸ್ಸುಗಳನ್ನು ಸರ್ಕಾರ ಪರಿಗಣಿಸಿ ಕ್ರಮ ಕೈಗೊಳ್ಳುವುದೇ, ಇಲ್ಲದಿದ್ದಲ್ಲಿ ಕಾರಣಗಳೇನು?

ಡಾ॥ ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು

ಆ) 1) ಸಮಾಜಶಾಸ್ತ್ರ ಮತ್ತು ಇತಿಹಾಸ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಾಪಕರುಗಳ ನಡುವಣ ಘರ್ಷಣೆಯಿಂದಾಗಿ ಉಂಟಾದ ವಿದ್ಯಾರ್ಥಿಗಳ ಅಶಿಸ್ತು.

2) 2001ನೇ ಏಪ್ರಿಲ್ ಪರೀಕ್ಷೆಯಲ್ಲಿ ಸಮಾಜಶಾಸ್ತ್ರ ಅಧ್ಯಾಯನ ವಿಭಾಗದ ಶ್ರೀ ಸಿದ್ದಪ್ಪ ಎಂಬ ಎಂ.ಎ ವಿದ್ಯಾರ್ಥಿಗೆ ಕಡಿಮೆ ಅಂಕಗಳನ್ನು ನೀಡಿರುವ ಮತ್ತು ಇದರಿಂದ ವಿದ್ಯಾರ್ಥಿಯು ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ವಿಭಾಗದ ಅಧ್ಯಕ್ಷರ ಮೇಲೆ ಆರೋಪಣೆ.

3) ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಡಾನಿಡಾ ಪ್ರಾಜೆಕ್ಟ್‌ನ ಸಂಶೋಧಕರಾಗಿದ್ದ ಶ್ರೀಮತಿ ಎನ್.ಎಸ್. ವಾಸಂತಿರವರು ಪ್ರಾಜೆಕ್ಟ್ ಇನ್ವೆಸ್ಟಿಗೇಟರ್ ಇವರು ಡಾ॥ ಹೆಚ್. ಶೇಖರ್‌ಶೆಟ್ಟಿರವರ ವಿರುದ್ಧ ದುರ್ನಡತೆ ಬಗ್ಗೆ ಮಾಡಿರುವ ಆರೋಪಣೆ.

4) 2000ರ ಜನವರಿಯಲ್ಲಿ ಜರುಗಿದ ಎಂಬಿಬಿಎಸ್ ಪರೀಕ್ಷೆಗಳ ಅಂಕಪಟ್ಟಿ/ಫಲಿತಾಂಶ ಇತ್ಯಾದಿಗಳನ್ನು ತಿದ್ದಿದ ಹಗರಣ.

ಇ) ಇಲ್ಲ.

ಈ) ಯಾವುದೇ ಹಣ ದುರುಪಯೋಗವಾಗಿಲ್ಲ.

ಉ) ಯಾವುದೇ ಹಣ ದುರ್ಬಳಕೆ ಇಲ್ಲ.

ಹೌದು

ಊ) ಅವರ ಸೇವೆಯನ್ನು ಈಗಾಗಲೇ ಹಿಂತೆಗೆದುಕೊಳ್ಳಲಾಗುತ್ತಿದೆ.